ಪುಟಾಣಿ ಹಕ್ಕಿಯನ್ನು ಕೊಲ್ಲಲು ಮನಸ್ಸಾದರೂ ಹೇಗೆ ಒಪ್ಪುವುದೋ? ಎಂದು ಚಿಂತಿಸುತ್ತಾ ದಿಗ್ಭ್ರಮೆಗೆ ಒಳಗಾದೆ. ಇದರದೇ ಪ್ರಜಾತಿಗೆ ಸೇರಿದ ಯೂಹೀನ ಎನ್ನುವ ಚಿಕ್ಕ ಪಕ್ಷಿಯನ್ನೂ ಜನ ಬೇಟೆಯಾಡುತ್ತಾರಂತೆ.

ಬಾರ್-ಥ್ರೋಟೆಡ್ ಮಿನ್ಲಾ ಅಥವಾ ಚೆಸ್ಟ್‌ನಟ್-ಟೈಲ್ಡ್ ಮಿನ್ಲಾ ಎಂದು ಕರೆಯಲಾಗುವ ಈ ಹಕ್ಕಿ ಲಿಯೊಥ್ರಿಚಿಡೆ ಎಂಬ ಒಂದು ಪ್ರಜಾತಿಗೆ ಸೇರಿದ್ದು. ಈ ಜಾತಿಯ ಹಕ್ಕಿಗಳೆಲ್ಲವೂ ಹೆಚ್ಚುಕಡಿಮೆ ಆಕಾರದಲ್ಲಿ ನಮ್ಮ ಗುಬ್ಬಿ, ಬಿಳಿಗಣ್ಣ, ಇಲ್ಲವೇ ಮುನಿಯಾ ಗಾತ್ರದ ಬಡ ಜೀವಗಳು. ಸದಾ ಬಣ್ಣದ ರೆಕ್ಕೆ ಬಡಿಯುತ್ತಾ ಸದಾ ಲವಲವಿಕೆಯಿಂದ ಓಡಾಡಿಕೊಂಡಿರುತ್ತವೆ. ಅಕ್ಕಿಯ ನುಚ್ಚು, ಕಾಳು ಮತ್ತು ಹುಲ್ಲಿನ ಬೀಜಗಳನ್ನು ಇವು ತಿನ್ನುವುದನ್ನು ಮಾತ್ರ ನಾನು ಕಂಡಿದ್ದೆ. ಪಕ್ಷಿ ತೋರುಗ ಬಿಜಯ್, 'ಸರ್ ಇದು ಋತುಮಾನಕ್ಕೆ ತಕ್ಕಂತೆ ಆಹಾರ ಬದಲಾಯಿಸಿಕೊಳ್ಳುವ ಕಿಲಾಡಿ ಸರ್. ಚಳಿಗಾಲದ ಸಮಯದಲ್ಲಿ ಹಣ್ಣುಗಳನ್ನು ತಿಂದು, ಜೇನನನ್ನು ಸವಿಯುತ್ತದೆ. ಅದೇ ಬೇಸಿಗೆಯ ಸಮಯಲ್ಲಿ ರೈತರ ಹೊಲದ ಕೀಟಗಳನ್ನು ಹಿಡಿದು ಭಕ್ಷಿಸುತ್ತದೆ. ಒಂತರ ಇದೂ ಕೂಡ ರೈತ ಮಿತ್ರ' ಎಂದ. ಮಿತ್ರನಾಗಿದ್ದರೂ ಜನ ಶತ್ರುವಿನಂತೆ ಬಡಿದು ಹಾಕುತ್ತಿದ್ದಾರಲ್ಲ ಎಂದು ಚಿಂತೆ ವ್ಯಕ್ತಪಡಿಸಿದೆ. ಮನುಷ್ಯ ಜಾತಿನೇ ಅಂಥದ್ದು ಉಪಕಾರಿಗಳನ್ನೇ ಮೊದಲು ಕೊಲ್ಲೋದಲ್ಲವೇ? ಎಂದು ಸಂತನಂತೆ ಉತ್ತರಿಸಿದ.

ಇಲ್ಲಿಂದ ನಾವು ಹೊರಟು ಮಾರನೆಯ ದಿನ ಬೆಳಗ್ಗೆ ಡಾರ್ಜಲಿಂಗ್ ಹತ್ತಿರವಿರುವ 'ಟೈಗರ್ ಹಿಲ್' ಎಂಬ ಜಾಗೆಗೆ ಬಂದೆವು. ಒಂದಾನೊಂದು ಕಾಲದಲ್ಲಿ ಇಲ್ಲಿ ಹುಲಿಗಳು ಹೇರಳವಾಗಿದ್ದ ಕಾರಣಕ್ಕೆ 'ಟೈಗರ್ ಹಿಲ್' ಎನ್ನುವ ಹೆಸರು ಬಂದಿದೆ ಎಂದು ತಿಳಿಸಿದ. ದಟ್ಟ ಕಾಡಿರುವ ಎತ್ತರದ ಪ್ರದೇಶವಿದು. ಮೊದಲಿನಷ್ಟು ಹುಲಿಗಳು ಈಗ ಇಲ್ಲಿ ಉಳಿದಿಲ್ಲ. ಆದರೂ ಹೆಸರು ಮಾತ್ರ ಹಾಗೇ ಅಂಟಿಕೊಂಡಿದೆ. ಇಲ್ಲೊಂದು ಶಕ್ತಿ ಮಾತೆಯ ದೇವಾಲಯವಿದ್ದು ಭಕ್ತರು ಬಂದು ಹೋಗುತ್ತಿರುತ್ತಾರೆ. ಉಳಿದಂತೆ ಪ್ರವಾಸಿಗಳು ಬೆಳಗಿನ ರವಿಯ ಸೊಬಗನ್ನು ನೋಡಿ ಮನದುಂಬಿಕೊಳ್ಳಲು ಇಲ್ಲಿಗೆ ಬಂದೇ ಬರುತ್ತಾರೆ. ಸೂರ್ಯನ ಮೊದಲ ಕಿರಣಗಳು ಮಂಜು ಕವಿದ ಪ್ರಸಿದ್ಧ ಕಾಂಚನಜುಂಗ ಪರ್ವತದ ಮೇಲೆ ಮೊದಲು ಧುಮುಕುತ್ತವೆ. ಆಗ ಸುತ್ತಲೂ ಕತ್ತಲಿದ್ದು ನಡುವೆ ಮಾತ್ರ ವಜ್ರದಂತೆ

